ಕೈಮಗ್ಗ ನೇಕಾರರಿಗೆ ಪ್ರೋತ್ಸಾಹ

42 (231)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಆಸ್ಪತ್ರೆಗಳಿಗೆ ಬೇಕಾಗುವ ಬೆಡ್‌ಶೀಟ್‌ಗಳು, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾಗುವ ಉಡುಪುಗಳಿಗೆ ಕೆ.ಹೆಚ್.ಡಿ.ಸಿ.ಯವರಿಂದ ಬಟ್ಟೆಗಳನ್ನು ಪೂರೈಸಲಾಗುತ್ತಿದೆಯೇ? ಪೂರೈಸುತ್ತಿದ್ದಲ್ಲಿ ಪ್ರಸಕ್ತ ವರ್ಷದಲ್ಲಿ ಸರಬರಾಜು ಮಾಡಲಾದ ಬಟ್ಟೆಗಳ ಪ್ರಮಾಣ ಎಷ್ಟು?

ಆ) ರಾಜ್ಯದಲ್ಲಿನ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳಿಗೆ ಕಡ್ಡಾಯವಾಗಿ ಕೆ.ಹೆಚ್.ಡಿ.ಸಿ.ಯವರಿಂದ ಬಟ್ಟೆಗಳನ್ನು ಕೊಂಡುಕೊಳ್ಳುವಂತೆ ಆದೇಶಿಸಿ ನೇಕಾರರಿಗೆ ಪ್ರೋತ್ಸಾಹಿಸಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಎಂ.ಎನ್.ಪಾಟೀಲ್ (ಜವಳಿ ಸಚಿವರು):

ಅ) ಹೌದು.

| | |
|---|---|
| ಬೆಡ್‌ಶೀಟ್, ಟವೆಲು ಜಮಖಾನ್ | 79,066 ನಂಬರ್‌ಗಳು |
| ಸೀರೆಗಳು, ಸಮವಸ್ತ್ರ ಉಡುಪು | 3.09 ಲಕ್ಷ ಮೀಟರ್‌ಗಳು. |

ಆ) ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ.

12.00 ಪಿ.ಎಂ

ಶ್ರೀ ಕುಂಬ್ಳೆ ಸುಂದರ್‌ರಾವ್: ಅಧ್ಯಕ್ಷರೇ, ಉತ್ತರದಲ್ಲಿ ಒಂದು ಸ್ಪಷ್ಟವಾಗಿದೆ. ರಾಜ್ಯದಲ್ಲಿನ ಆಸ್ಪತ್ರೆಗಳಿಗೆ ಬೇಕಾಗುವಂಥ ಬೆಡ್‌ಷೀಟು, ಹಾಸ್ಟಲ್ ವಿದ್ಯಾರ್ಥಿಗಳಿಗೆ ಬೇಕಾಗುವಂಥ ಬಟ್ಟೆಬರೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಎಷ್ಟು ತೆಗೆದುಕೊಳ್ಳುತ್ತಿದ್ದೇವೆ ಎಂದು ಕೇಳಿದ್ದಕ್ಕೆ 79,066 ಸಂಖ್ಯೆಗಳು ಮತ್ತು 3 ಲಕ್ಷ ಮೀಟರು ಬಟ್ಟೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಷ್ಟು ದೊಡ್ಡ ರಾಜ್ಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಇಷ್ಟನ್ನು ಕೊಂಡರೆ ಅವಶ್ಯಕತೆ ಪೂರೈಸುವುದಿಲ್ಲ ಎಂಬುದು ಸ್ಪಷ್ಟ. ಆದ್ದರಿಂದ, ನಾನೊಂದು ಪ್ರಶ್ನೆ ಕೇಳುತ್ತಾ ಇದ್ದೇನೆ. ಹೊರ ರಾಜ್ಯಗಳಾದ ಆಂಧ್ರ ಇರಬಹುದು, ತಮಿಳುನಾಡು ಇರಬಹುದು ಅಲ್ಲಿಂದ ನೀವು ಎಷ್ಟು ಬಟ್ಟೆ ಕೊಂಡುಕೊಂಡಿದ್ದೀರಿ? ಕೊಂಡು ಕೊಳ್ಳುವ ಅಗತ್ಯ ಏನುಬಂತು?

ಶ್ರೀ ಬಿ.ಎನ್.ಬಚ್ಚೇಗೌಡ (ಜವಳಿ ಸಚಿವರ ಪರವಾಗಿ): ಅಧ್ಯಕ್ಷರೇ, ನೇಕಾರರ ಹಿತ ಕಾಪಾಡಬೇಕೆಂದು ಹೇಳಿ, ರೇಷ್ಮೆ ಆಗಬಹುದು ಅಥವಾ ನಮ್ಮ ಕೈಮಗ್ಗ ನೇಕಾರರು ಆಗಬಹುದು. ಅವರು ಯಾರೇ ಆಗಲೀ, ಈ ರಾಜ್ಯದಲ್ಲಿ ಅವರ ಹಿತ ಕಾಪಾಡುವುದಕ್ಕೋಸ್ಕರ ಈ ನಿಗಮವನ್ನು ಸ್ಥಾಪನೆ ಮಾಡಿರತಕ್ಕಂಥಾದ್ದು. ಈಗಾಗಲೇ ಮಾನ್ಯ ಕುಂಬ್ಳೆ ಸುಂದರ್‌ರಾವ್‌ರವರು ತಿಳಿಸಿದಹಾಗೆ ಸರ್ಕಾರದ ಆದೇಶ ಕೊಟ್ಟು, ಕಡ್ಡಾಯವಾಗಿ ಈ ಸಂಸ್ಥೆಗಳಿಂದಲೇ ಯಾವುದೇ ಬಟ್ಟೆ ಅಥವಾ ಬೆಡ್‌ಷೀಟ್ಸ್ ಮಾಡುವಂತಾದ್ದನ್ನು ಕೊಂಡುಕೊಳ್ಳಬೇಕೆಂದು ಆದೇಶವನ್ನು ಹೊರಡಿಸಲಾಗಿದೆ. ಅವರ ಹಿತವನ್ನು ಕಾಪಾಡುವುದೇ ನಮ್ಮ ಗುರಿ ಮತ್ತು ಈ ನಿಗಮದ ಗುರಿ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಹೊರ ರಾಜ್ಯಗಳಿಂದ ಎಷ್ಟು ಬಟ್ಟೆತರಿಸಿದ್ದೀರಿ ಎಂದು ಕೇಳಿದ್ದಾರೆ. ಈ ಅಂಕಿಅಂಶಗಳು ನನ್ನ ಹತ್ತಿರ ಇಲ್ಲ. ಈಗ ನಾವು ಮಾತ್ರ ಈ ನಿಗಮದಿಂದ, ನೇಕಾರರ ಹಿತವನ್ನು ಕಾಪಾಡತಕ್ಕ ಪ್ರಶ್ನೆಯನ್ನು ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು: ರಾಜ್ಯದಲ್ಲಿ ಅಗತ್ಯವಿರತಕ್ಕ ಬಟ್ಟೆ, ಬಹಳ ದೊಡ್ಡ ಪ್ರಮಾಣದ್ದು ಇದೆ. ಇಲ್ಲಿ ಕೊಟ್ಟಿರತಕ್ಕ ನಿಮ್ಮ ಅಂಕಿಸಂಖ್ಯೆ ಏನಿದೆ, ಇದು ಬಹಳ ಕಡಿಮೆಯಾಯಿತು. ನಿಮ್ಮ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಥವಾ ಇತರೆ ಸಂಸ್ಥೆಗಳ ಮುಖಾಂತರ ಪೂರ್ಣ ಅಗತ್ಯವಿರತಕ್ಕಂಥ ಎಲ್ಲಾ ಬಟ್ಟೆಯನ್ನೂ ನಮ್ಮ ರಾಜ್ಯದಲ್ಲಿಯೇ ಕೊಂಡು, ನಮ್ಮಲ್ಲಿರತಕ್ಕ ನೇಕಾರರಿಗೆ ಪ್ರೋತ್ಸಾಹ ಕೊಡಬೇಕು. ಇವರು ಇದನ್ನು ಮಾಡಿಬಿಟ್ಟು, ಉಳಿದ ಬಾಕಿ ಅಗತ್ಯವಿರತಕ್ಕಂಥ ಬಟ್ಟೆಯನ್ನು ಹೊರ ರಾಜ್ಯಗಳಿಂದ ತೆಗೆದುಕೊಳ್ಳುತ್ತಿದ್ದಾರೆ; ನಮ್ಮ ನೇಕಾರರಿಗೆ ಇಲ್ಲಿ ತೊಂದರೆಯಾಗುತ್ತಿದೆ ಎನ್ನುವುದು ಅವರ ಪ್ರಶ್ನೆ.

ಶ್ರೀ ಕುಂಬ್ಳೆ ಸುಂದರರಾವ್: ಬ್ಯಾಂಡೇಜ್ ಬಟ್ಟೆಯೇ ಎಷ್ಟು ಬೇಕು, ಅಷ್ಟು ನೇಯುವುದಕ್ಕೂ ನಮ್ಮವರಿಗೆ ಯೋಗ್ಯತೆ ಇಲ್ಲವೇ? ಅದಕ್ಕೂ ನಮಗೆ ತಮಿಳುನಾಡಿನವರು ಬೇಕೇ?

ಶ್ರೀ ಬಿ.ಎನ್.ಬಚ್ಚೇಗೌಡ: ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕ, ಕೈಮಗ್ಗದಿಂದ ಮತ್ತು ನೇಕಾರರು ಮಾಡುವಂಥ ಬಟ್ಟೆಯನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆ.

ಅಧ್ಯಕ್ಷರು: ಇವತ್ತು ಎಂ.ಎಸ್.ಪಾಟೀಲರು ಇಲ್ಲ. ತಾವು ದಯವಿಟ್ಟು ಅಧಿಕಾರಿಗಳಿಗೆ ಸೂಚನೆ ಕೊಡಿ. ನಿಜವಾಗಿಯೂ ಇರತಕ್ಕ ರಿಕ್ವೈರ್‌ಮೆಂಟ್ ಏನು, ಅದನ್ನು ನಮ್ಮಲ್ಲಿ ಪರ್ಚೇಸ್ ಮಾಡಬೇಕು. ಇದು ಅತ್ಯಂತ ಆಸಕ್ತಿಯುತವಾದ ಪ್ರಶ್ನೆ. ನಮ್ಮಲ್ಲಿರತಕ್ಕ ನೇಕಾರರಿಗೆ ಅನುಕೂಲವಾಗಬೇಕು ಅದನ್ನು ಬಿಟ್ಟು, ಯಾವುದೋ ಕಾರಣಕ್ಕೋಸ್ಕರ ಹೊರಗಡೆಯಿಂದ ತೆಗೆದುಕೊಂಡರೆ, ನಾವು ನಮ್ಮ ನೇಕಾರರಿಗೆ ಏನು ಪ್ರೋತ್ಸಾಹ ಕೊಟ್ಟಂತಾಗುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗಾಗಲೇ ನಮ್ಮ ನೇಕಾರರು, ನೇಯ್ದ ಬಟ್ಟೆಗಳಿಗೆ ಎಲ್ಲಿಯೂ ಮಾರ್ಕೆಟ್ ಇಲ್ಲದೇ ನೇಕಾರರ ವೃತ್ತಿಯನ್ನೇ ಕೈಬಿಟ್ಟು ಬೀದಿ ಪಾಲಾಗುತ್ತಿದ್ದಾರೆ. ಆದ್ದರಿಂದ, ಇಲ್ಲಿ ಅಷ್ಟು ಒಳ್ಳೆಯ ಬಟ್ಟೆ ತಯಾರು ಮಾಡಬೇಕಾದರೆ, ಅದಕ್ಕೆ ನೀವು ಆದ್ಯತೆ ಕೊಡಿ.

ಅಧ್ಯಕ್ಷರು: ಇದು ಒಳ್ಳೆಯ ಪ್ರಶ್ನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಹೊರಗಡೆಯಿಂದ ತರಿಸುವಂಥ ವ್ಯವಸ್ಥೆ ಇದ್ದರೆ, ಅದನ್ನು ನಿಲ್ಲಿಸುತ್ತೇವೆ.

ಗದಗ ಬೆಟಗೇರಿ ನಗರದಲ್ಲಿ ಕುಡಿಯುವ ನೀರಿನ ಸರಬರಾಜು

43 (11)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ಬೆಟಗೇರಿ ನಗರ ನೀರು ಸರಬರಾಜನ್ನು ವ್ಯವಸ್ಥಿತಗೊಳಿಸಲು ಇನ್ನೂ ಹಲವಾರು ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲು ಹಾಗೂ ಈಗಿರುವ ವಿತರಣಾ ಪೈಪಲೈನ್‌ಗಳನ್ನು ಬದಲಾವಣೆ ಮಾಡುವ ಪ್ರಸ್ತಾವನೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮುಂದೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರಸ್ತಾವನೆಯನ್ನು ಮಂಜೂರು ಮಾಡಲು ಮಂಡಲಿಯು ತೆಗೆದುಕೊಂಡಿರುವ ಕ್ರಮಗಳೇನು?

ಇ) ಇದನ್ನು ಇದೇ ಆರ್ಥಿಕ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳುವರೇ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಈ ನಗರಗಳಲ್ಲಿ ಹಾಲಿ ವಿತರಣಾ ಜಾಲದ ಬದಲಾವಣೆ ಮಾಡಲು ಮತ್ತು ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲು, ಸರ್ವೆ ಕಲಸವನ್ನು ಈಗಾಗಲೇ ಮಾಡಲಾಗಿದೆ. ಈಗ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗುವುದು.

ಇ) ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಹೊರಗಿನ ಸಂಸ್ಥೆಗಳಿಂದ ಆರ್ಥಿಕ ಸಹಾಯ ಪಡೆದು 1998-99ರಲ್ಲಿ ಕೈಗೆತ್ತಿಕೊಳ್ಳಲು